ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 01 ಸಿಡಿಸಿ(2) 2018-19 | 1054

ನಿರ್ದೇಶಕರ ಕಛೇರಿ
ಅರಮನೆ ರಸ್ತೆ
ಬೆಂಗಳೂರು-560 001
ದಿ: 28-06-2018.

## -:ಸುತ್ತೋಲೆ:-

ವಿಷಯ: ಎನ್.ಐ.ಟಿ.ಟಿ.ಟಿ.ಆರ್ ವಿಸ್ತರಣಾ ಕೇಂದ್ರ, ಬೆಂಗಳೂರಿನಲ್ಲಿ ಜುಲೈ-2018ರಲ್ಲಿ ನಡೆಯುವ ಬದಲಾದ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಗೆ ಕರ್ನಾಟಕ ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರನ್ನು ನಿಯೋಜನೆ ಮಾಡುವ ಕುರಿತು.

ಉಲ್ಲೇಖ:
1. ನಿರ್ದೇಶಕರು, ಎನ್.ಐ.ಟಿ.ಟಿ.ಟಿ.ಆರ್. ಚೆನ್ನೈ ಇವರ ಪತ್ರ ಸಂಖ್ಯೆ:CCD/ Rev.PRO/FDP/July 2018/2018-19/3, Dated:June 25, 2018
2. ಈ ಕಛೇರಿ ಸಮ ಪತ್ರ ಸಂಖ್ಯೆ ದಿನಾಂಕ:15-06-2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ ಎನ್.ಐ.ಟಿ.ಟಿ.ಟಿ.ಆರ್ ವಿಸ್ತರಣಾ ಕೇಂದ್ರ, ಬೆಂಗಳೂರಿನಲ್ಲಿ ಜುಲೈ-2018ರಲ್ಲಿ ನಡೆಯುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳ ಬದಲಾದ ವೇಳಾ ಪಟ್ಟಿಯ ಮಾಹಿತಿಯನ್ನು ಕರ್ನಾಟಕ ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರುಗಳ ಗಮನಕ್ಕೆ ತರಲಾಗಿದೆ.

| Sl.no | Course Code | Course Title | Schedule Date | Re-Schedule Date |
|---|---|---|---|---|
| 01 | FDP-35 | NBA Accreditation Based on OBE | 02-07-2018 to 13-07-2018 | 16-07-2018 to 27-07-2018 |
| 02 | FDP-58 | NBA Accreditation Based on OBE | 30-07-2018 to 03-08-2018 | |
| 03 | FDP-40 | Developing Professional Ethics, Values & Communication Skills | 09-07-2018 to 13-07-2018 | 09-07-2018 to 13-07-2018 |
| | ECB-01 | Developing Professional Ethics, Values & Communication Skills | ----- | 30-07-2018 to 03-08-2018 |
| 04 | FDP-47 | Induction Programme | 16-07-2018 to 27-07-2018 | Postpone to August 2018 |

ಈಗಾಗಲೇ ಉಲ್ಲೇಖ(2)ರ ಈ ಕಛೇರಿ ಸುತ್ತೋಲೆಯನ್ವಯ Google formನಲ್ಲಿ ಅಲ್ಪಾವಧಿ ತರಬೇತಿ FDP-35 & FDP-58ಗೆ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡ ಸಿಬ್ಬಂದಿ ವರ್ಗದವರು ಇಲಾಖೆಯ ಅನುಮತಿ ಅನ್ವಯ ಬದಲಾದ ದಿನಾಂಕಗಳಂದು ತರಬೇತಿಗೆ ಹಾಜರಾಗುವುದು. ಅಲ್ಪಾವಧಿ ತರಬೇತಿ FDP-40ಗೆ ಹೆಚ್ಚಾಗಿ ಸಿಬ್ಬಂದಿ ವರ್ಗದವರು ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿರುವುದರಿಂದ, ಅದೇ ವಿಷಯದ ಮತ್ತೊಂದು ಅಲ್ಪಾವಧಿ ತರಬೇತಿ(ECB-01)ಯನ್ನು ದಿನಾಂಕ:30-07-2018 ರಿಂದ ದಿನಾಂಕ:03-08-2018ರವರೆಗೆ ಎನ್.ಐ.ಟಿ.ಟಿ.ಟಿ.ಆರ್ ವಿಸ್ತರಣಾ ಕೇಂದ್ರ, ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ. ಈಗಾಗಲೇ ಅಲ್ಪಾವಧಿ ತರಬೇತಿ FDP-40ಗೆ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡ ಸಿಬ್ಬಂದಿ ವರ್ಗದವರನ್ನು ಎರಡು ಬ್ಯಾಚ್‌ಗಳಾಗಿ ವಿಂಗಡಿಸಿ ಕೋಷ್ಟಕದಲ್ಲಿ ನಮೂದಿಸಿರುವ ದಿನಾಂಕಗಳಂದು ಎನ್.ಐ.ಟಿ.ಟಿ.ಟಿ.ಆರ್ ವಿಸ್ತರಣಾ ಕೇಂದ್ರ, ಬೆಂಗಳೂರು ಇಲ್ಲಿ ತರಬೇತಿಗಳನ್ನು ನಡೆಸಲಾಗುವುದು. ಸದರಿ ಬದಲಾವಣೆಗಳಿಂದ ಉಂಟಾಗುವ ಅನಾನುಕೂಲಗಳನ್ನು jointdirector.cdc@gmail.com, ಇವರ ಮೇಲ್ ಮೂಲಕ ಸಂಪರ್ಕಿಸಲು ಸಂಸ್ಥೆಯ ಪ್ರಾಚಾರ್ಯರು/ಸಿಬ್ಬಂದಿ ವರ್ಗದವರು ಇತ್ಯರ್ಥಪಡಿಸಿಕೊಳ್ಳಬುದಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:
1. ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.